ಅಸಲು ದಾವೆ ಸಂಖ್ಯೆ- 12/2010
ಡಿಡಬ್ಲ್ಯೂ- 03
ದಿನಾಂಕಃ 21.09.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ ಆರ್ ಕೆ ವಕೀಲರಿಂದ</u>

ದಾವಾ ಆಸ್ತಿ ನಂ.227 /1 ಎನ್ನುವುದು ಸರಿಯಲ್ಲ, ಅದರ ನಂ.25 ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ ಇರುತ್ತದೆ ಎನ್ನುವುದು ಸರಿ. ದಾವಾ ಆಸ್ತಿ ಖುಲ್ಲಾ ಜಾಗೆ ಇರುತ್ತದೆ ಎನ್ನುವುದು ಸರಿ. ದಾವಾ ಆಸ್ತಿ ಮಧ್ಯದಲ್ಲಿ ಸರಕಾರಿ ನಳ ಇರುತ್ತದೆ ಎನ್ನುವುದು ಸರಿಯಲ್ಲ, ನಮ್ಮದೇ ನಳ ಇರುತ್ತದೆ. ಸದರಿ ನಳ ನಾವು ತೆಗೆದುಕೊಂಡಿಲ್ಲ, ಭೂಶೆಟ್ಟಿಯವರು ತೆಗೆದುಕೊಂಡಿರುವ ನಳ ಇರುತ್ತದೆ. ಭೂಶೆಟ್ಟಿಯವರ ಸೊಸೆ ಪುರಸಭೆಯ ಸದಸ್ಯ ಆಗಿದ್ದರು ಎಂದರೆ ಸರಿ. ನಮ್ಮ ದಾವಾ ಆಸ್ತಿಯ ಆಜು ಬಾಜುವಿನ ಆಸ್ತಿ ನಂಬರು ಹೇಳಲು ಬರುವುದಿಲ್ಲ, ಅವರಲ್ಲಿ ಒಬ್ಬರ ಹೆಸರು ಮಿರಜಕರ ಅಂತಾ ಇರುತ್ತದೆ. ದಾವಾ ಆಸ್ತಿಯು ವಾದಿಯರ ಆಸ್ತಿ ಎಂದರೆ ಸರಿಯಲ್ಲ, ನಮ್ಮ ಆಸ್ತಿಯ ದಕ್ಷಿಣಕ್ಕೆ ಒಂದು ಸಣ್ಣ ಕಾಲು ದಾರಿ ರಸ್ತೆ ಇರುತ್ತದೆ, ಆದಾದ ನಂತರ ವಾದಿಯರ ಆಸ್ತಿ ಇರುತ್ತದೆ. ನಾವು ನಮ್ಮ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಭೂಶೆಟ್ಟಿಯವರಿಗೆ ಸದರಿ ಆಸ್ತಿ ಹೇಗೆ ಬಂದಿರುತ್ತದೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ಹೈಕೋರ್ಟ ಡಬ್ಲ್ಯೂ ಪಿ ನಂ.17776/1999 ನೇದ್ದರ ಆದೇಶ ನೋಡಿ ಖರೀದಿಸಿರುತ್ತೇವೆ. ಸದರಿ ಅರ್ಜಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಪುರಸಭೆಯವರು ಮಾಡಿದ ಆದೇಶವನ್ನು ರದ್ದುಪಡಿಸಿ ಪುನರ್ ಚೌಕಾಸಿ ಮಾಡಲು ಆದೇಶ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅದರಲ್ಲಿ ಏನು ಆದೇಶವಾಗಿರುತ್ತದೆ ನನಗೆ ಗೊತ್ತಿಲ್ಲ. ಪುನರ್ ಚೌಕಾಸಿ ಮಾಡಿದರೆ ಭೂಶೆಟ್ಟಿಯವರ ಹೆಸರು ಕಡಿಮೆಯಾಗಿ ವಾದಿಯರ ಹೆಸರು ಬರುತ್ತದೆ ನಾವು ನೇರವಾಗಿ ನಮ್ಮ ಹೆಸರು ದಾಖಲಿಸಿರುತ್ತೇವೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುವುದಿಲ್ಲ.

ಭೂಶೆಟ್ಟಿಯವರು ಅಸಲು ದಾವೆ ನಂ.66/2011 ದಾಖಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯ ಕುರಿತು ಭೂಶೆಟ್ಟಿಯವರು ನನಗೆ ಏನು ತಿಳಿಸಿಲ್ಲ. ಭೂಶೆಟ್ಟಿಯವರಿಗೆ ಹೇಗೆ ಆಸ್ತಿ ಬಂದಿರುತ್ತದೆ ಅಂತಾ ನಾವು ವಿಚಾರಿಸಿಲ್ಲ, ಹೈಕೋರ್ಟ ಆದೇಶ ನೋಡಿ ಖರೀದಿಸಿದ್ದೇನೆ. ಹೈಕೋರ್ಟನಲ್ಲಿ ಏನು ಆದೇಶ ಆಗಿರುತ್ತದೆ ಅಂತಾ ತಿಳಿದುಕೊಂಡಿಲ್ಲ. ದಾವಾ ಆಸ್ತಿಯನ್ನು ಭೂಶೆಟ್ಟಿಯವರು ಖೊಟ್ಟಿಯಾಗಿ ತಮ್ಮ ಹೆಸರಿನಲ್ಲಿ ದಾಖಲಿಸಿಕೊಂಡಿರುತ್ತಾರೆ ಅದು ಗೊತ್ತಿದ್ದು, ನಾವು ದಾವಾ ಆಸ್ತಿಯನ್ನು ಖರೀದಿಸಿದ್ದೇವೆ

ಎನ್ನುವುದು ನನಗೆ ಗೊತ್ತಿಲ್ಲ. ಭೂಶೆಟ್ಟಿಯವರ ಸೊಸೆ ಪುರಸಭೆ ಸದಸ್ಯ ಆಗುವ ಮೊದಲು ಆಸ್ತಿ ನಂ.25 ಎಂಬುವುದು ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಭೂಶೆಟ್ಟಿಯವರ ಸಾಕಷ್ಟು ದಾವೆಗಳು ಈ ನ್ಯಾಯಾಲಯದಲ್ಲಿ ನಡೆದಿರುತ್ತವೆ ಎನ್ನುವುದು ನನಗೆ ಗೊತ್ತಿಲ್ಲ. ಸಿದ್ಧಲಿಂಗೇಶ್ವರ ಟಾಕೀಜ್ ಎನ್ನುವುದು ಭೂಶೆಟ್ಟಿಯವರ ಆಸ್ತಿ ಎನ್ನುವುದು ಸರಿ. ಸಿದ್ಧಲಿಂಗೇಶ್ವರ ಟಾಕೀಜ್ ಮತ್ತು ಚೋಪದಾರ ಎಂದರೆ ವಾದಿ ಇವರ ಆಸ್ತಿ ಮಧ್ಯ ದೊಡ್ಡ ರಸ್ತೆ ಇರುತ್ತದೆ ಎನ್ನುವುದು ಸರಿ. ಸದರಿ ರಸ್ತೆ 18 ಫೂಟು ಅಗಲ ಇರುತ್ತದೆ ಎನ್ನುವುದು ಸರಿ. ರಸ್ತೆ ಪೂರ್ವಕ್ಕೆ ಮಾತ್ರ ಭೂಶೆಟ್ಟಿಯವರ ಆಸ್ತಿಗಳು ಇರುತ್ತವೆ, ರಸ್ತೆಯ ಪಶ್ಚಿಮಕ್ಕೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಾವು ಖರೀದಿಸಿದ ಆಸ್ತಿ ಇರುತ್ತದೆ. ನಾನು ಸದರಿ ದಾವಾ ಆಸ್ತಿಗೆ ಸಂಬಂದಸಿಪಟ್ಟಂತೆ ಭೂಶೆಟ್ಟಿಯವರ ಹೆಸರಿನಲ್ಲಿರುವ ಕುರಿತು ಹಳೆಯ ದಾಖಲೆಗಳನ್ನು ನೋಡಿಲ್ಲ. ಹೈಕೋರ್ಟ ಆದೇಶ ಹೊರತುಪಡಿಸಿ ಭೂಶೆಟ್ಟಿಯವರ ಆಸ್ತಿ ಅಂತಾ ಹೇಳಲು ಬೇರೆ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ಹೈಕೋರ್ಟ ಏನು ಆದೇಶ ಮಾಡಿರುತ್ತದೆ ಅಂತಾ ವಕೀಲರನ್ನು ಕೇಳಿ ತಿಳಿದುಕೊಂಡಿಲ್ಲ. ಭೂಶೆಟ್ಟಿಯವರಿಗೆ ದಾವಾ ಆಸ್ತಿಯವನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ, ಆದ್ದರಿಂದ ನನಗೂ ಸಹ ಸದರಿ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ನನಗೆ ಗೊತ್ತಿಲ್ಲ, ಅವರು ಕೊಟ್ಟಿರುತ್ತಾರೆ ನಾನು ತೆಗೆದುಕೊಂಡಿದ್ದೇನೆ. ಖೊಟ್ಟಿ ಖರೀದಿ ಪತ್ರ ಸೃಷ್ಟಿ ಮಾಡಿಕೊಂಡಿದ್ದರಿಂದ ಅದರ ಆಧಾರದ ಮೇಲೆ ನಮಗೆ ಯಾವುದೇ ಹಕ್ಕು ಸೃಷ್ಟಿಯಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಮ್ಮ ಖರೀದಿ ಪತ್ರ ನಿಡಿ-6 ರಲ್ಲಿ ಸದರಿ ಆಸ್ತಿಯಲ್ಲಿ ನಳ ಇರುವ ಕುರಿತು ನಮೂದಿಸಿಲ್ಲ ಎನ್ನುವುದು ಸರಿ. ನಿಡಿ-2 ನಾನು ಹೇಳುವ ಹೈಕೋರ್ಟ ಆದೇಶವಾಗಿರುತ್ತದೆ ಎನ್ನುವುದು ಸರಿ. ನಿಡಿ-2 ರ ಆದೇಶದ ಮೇರೆಗೆ ಪುರಸಭೆಯವರು ಪುನರ್ ಚೌಕಾಸಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-4 ರಲ್ಲಿ ಸಂಖ್ಯೆ -23/1 ಅಂತಾ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಆಸ್ತಿಯ ಪಕ್ಕದಲ್ಲಿ 22 ಅಥವಾ 24 ಅಥವಾ 26 ಆಸ್ತಿಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಆಸ್ತಿಗಳಿಗೆ ನಂಬರುಗಳನ್ನು ಕೊಡುವುದಾದರೆ ಕ್ರಮವಾಗಿ ಕೊಡುತ್ತಾರೆ ಎನ್ನುವುದು ಸರಿ. ಸದರಿ ನಾನು ಹೇಳುವ ಆಸ್ತಿ ಟಾಕೀಜನ ದಕ್ಷಿಣಕ್ಕೆ ಇರುತ್ತದೆ ಎನ್ನುವುದು ಸರಿ. ದಾವಾ ಆಸ್ತಿಗೆ ನಮಗೆ ಯಾವುದೇ ರೀತಿಯ ಸಂಬಂಧ ಇಲ್ಲ, ಖೊಟ್ಟಿ ದಾಖಲೆ ಸೃಷ್ಟಿಸಿ ನಮ್ಮದು ಅಂತಾ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಆಸ್ತಿ ಟಾಕೀಜಿನ ಪಶ್ಚಿಮಕ್ಕೆ ರಸ್ತೆ ಆದ ನಂತರ ಇರುತ್ತದೆ. ಟಾಕೀಜಿನ ಮುಂದೆ ದಕ್ಷಿಣಕ್ಕೆ ಸಾಕಷ್ಟು ಖುಲ್ಲಾ ಜಾಗೆ ಇರುತ್ತದೆ ಎಂದರೆ ಸರಿಯಲ್ಲ, ಮನೆ ಇರುತ್ತದೆ. ಸದರಿ ಟಾಕೀಜಿನ ಮುಂದೆ ದಕ್ಷಿಣಕ್ಕೆ ಇರುವ ಖುಲ್ಲಾ ಜಾಗದಲ್ಲಿ ಒಂದು ಬಿಡಿ ಫ್ಯಾಕ್ಟರಿ ಮತ್ತು ಚಹಾ ಹೊಟೇಲ್ ಇರುತ್ತದೆ ಎಂದರೆ ಸರಿಯಲ್ಲ.

ಟಾಕೀಜಿನ ದಕ್ಷಿಣಕ್ಕೆ ಕಂಪೌಂಡ್ ಇರುತ್ತದೆ ಎಂದರೆ ಸರಿ, ಕಂಪೌಂಡ್ ಒಳಗೆ ಖುಲ್ಲಾ ಜಾಗೆ ಇರುತ್ತದೆ ಎನ್ನುವುದು ಸರಿ. ವಾದಿಯರು ಮತ್ತು ಮಹಮ್ಮದಸಾಬ ಬಂಕಾಪೂರ ಇವರ ಮಧ್ಯ ಸಾಕಷ್ಟು ದಾವೆಗಳು 1965 ರಿಂದ ನಡೆದುಕೊಂಡು ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಕಲೀಲಹ್ಮದ ಬಂಕಾಪೂರ ಮತ್ತು ವಾದಿಯರ ನಡುವೆ ದಾವೆಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ವಾದಿಯರ ಆಸ್ತಿ ಅಂತಾ ಹೈಕೋರ್ಟನಲ್ಲಿ ಆದೇಶವಾಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಭೂಶೆಟ್ಟಿಯವರ ಸೊಸೆ ಪುರಸಭೆ ಸದಸ್ಯ ಆಗಿರುವಾಗ ಗೈರು ಲಾಭ ಪಡೆದುಕೊಂಡು ಖೊಟ್ಟಿ ದಾಖಲೆ ಸೃಷ್ಟಿಸಿಕೊಂಡಿದ್ದರಿಂದ ಅವರಿಗೆ ಯಾವುದೇ ಹಕ್ಕು ಉಂಟಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗಳ ಆಧಾರದ ಮೇಲೆ ನಾವು ಖೊಟ್ಟಿಯಾಗಿ ದಾಖಲೆ ಸೃಷ್ಟಿಸಿಕೊಂಡಿದ್ದರಿಂದ ನಮಗೂ ಸಹ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯ ಮನೆ ಮುಂದಿನ ಅಂಗಳ ಅಥವಾ ಜಾಗೆ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅಲ್ಲಿ ಕಾಲು ದಾರಿ ರಸ್ತೆ ಇರುತ್ತದೆ ಅಂತಾ ನುಡಿಯುತ್ತಾರೆ. ಕಾಲು ದಾರಿ ರಸ್ತೆ ಇರುತ್ತದೆ ಅಂತಾ ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ನನಗೆ ಗೊತ್ತಿಲ್ಲ. ನನ್ನ ದಾಖಲೆಯಲ್ಲಿ ಯಾವುದೇ ಕಾಲುದಾರಿ ಇರುತ್ತದಾ ಅಂತಾ ಬರೆದಿರುತ್ತಾರೆ ಎಂದರೆ, ಅದು ಕಾಲು ದಾರಿ ವಾದಿಯರದು ಇರಬಹುದು ಆದ್ದರಿಂದ ಬರೆದಿಲ್ಲ. ವಾದಿಯರ ಮನೆಯ ಪೂರ್ವಕ್ಕೆ ಇರುವ 18 ಪೂಟು ರಸ್ತೆ ಇರುತ್ತದೆ ಎನ್ನುವುದು ಸರಿ. ಅವರ ಮನೆ ರಸ್ತೆಗೆ ಹೊಂದಿಕೊಂಡು ಇರುವುದರಿಂದ ಕಾಲು ದಾರಿ ಇರುವುದಿಲ್ಲ, ನಾನು ಸುಳ್ಳು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೈಪಿಯತ್ತ ಬರೆಯಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಮಗೆ ಯಾವುದೇ ರೀತಿಯ ದಾವಾ ಆಸ್ತಿಯ ಮೇಲೆ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.